## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ. ಎಫ್.ಸಿ ನ್ಯಾಯಾಲಯ ಆಳಂದ

## ಸಿ.ಸಿ. ನಂ. 2209/2025

ಪಿರ್ಯಾದಿ ಕರ್ನಾಟಕ ಸರ್ಕಾರದ ಪರ
ಪಿ.ಎಸ್.ಐ ಮಾದನ ಹಿಪ್ಪರಗಾ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರು 1. ಗುರುಬಸಪ್ಪಾ ತಂದೆ ಸೋಮನಾಥ ಉಡಗಿ,
ವಯಃ28 ವರ್ಷ, ಉಃ ಕೂಲಿ ಕೆಲಸ,
ಸಾಃ ಹಿರೋಳ್ಳಿ ಗ್ರಾಮ ತಾಃ ಆಳಂದ
ಜಿಃ ಕಲಬುರಗಿ.

### ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಗಳ ಹೇಳಿಕೆ

ಪ್ರಶ್ನೆ 1 ನ್ಯಾಯಾಲಯದ ಮುಂದೆ ಅಭಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ ಆರೋಪಿ ಕೇಳಿರುತ್ತೇನೆ.

ಪ್ರಶ್ನೆ 2. **ಸಿ.ಡಬ್ಲೂ. 4. ಪಿ.ಡಬ್ಲೂ. 1 ಬಸವರಾಜ ತಂದೆ ಚಂದ್ರಕಾಂತ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ  ನಾನು 2021 ರಿಂದ ಇಲ್ಲಿಯವರೆಗೆ ಮಾದನ ಹಿಪ್ಪರಗ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆ ಅಂತಾ ಕಾರ್ಯ ನಿರ್ವಹಿಸುತ್ತಿದ್ದೇನೆ. ದಿಃ 22.02.2025 ರಂದು ನಾನು ಠಾಣೆಯಲ್ಲಿದ್ದಾಗ ಚಾಸ-1ರವರಎ ಹಿರೋಳ್ಳಿ ಗ್ರಾಮದಲ್ಲಿ ಅಕ್ರಮ ಸರಾಯಿ ಮಾರಟ ಮಾಡುವ ಬಗ್ಗೆ ಖಚಿತ ಬಾತ್ಮಿ ಬಂದಿದ್ದು, ನಾನು ಮತ್ತು ಚಾಸ-5ರವರು ಚಾಸ-1ರವರ ಜೊತೆಗೆ ದಾಳಿ ಮಾಡಲು ಹೋಗಬೇಕು ಎಂದು ಹೇಳಿ ಚಾಸಾ-5ರವರು ಜೀಪು ಚಾಲನೆ ಮಾಡುತ್ತಿದ್ದರು ನಾವು ಸರ್ಕಾರಿ ವಾಹನವಾದ ಕೆ.ಎ. 31 ಜಿ-1028 ರಲ್ಲಿ ಹೋಗಿರುತ್ತೇವೆ. ಹಿರೋಳ್ಳಿ ಗ್ರಾಮದಲ್ಲಿ ವಾಹನವನ್ನು ನಿಲ್ಲಿಸಿ ಇಬ್ಬ ಪಂಚರಾದ ಚಾಸ-2 ಮತ್ತು 3 ಕರೆಯಿಸಿ ಅವರಿಗೆ ವಿಷಯ ತಿಳಿಸಿ ಅವರು ಒಪ್ಪಿ ಕೊಂಡ ನಂತರ ಎಲ್ಲರೂ ಕೂಡಿಕೊಂಡು ಶ್ರೇಯಸ್ ಪಾನಶಾಪ್ ಹತ್ತಿರ ಸ್ವಲ್ಪ ದೂರದಲ್ಲಿ ನಿಲ್ಲಿಸಿ ನಾವೆಲ್ಲರೂ ಅಲ್ಲಿ ಹೋಗಿ ನೋಡಿದಾಗ ಗರುಬಸಪ್ಪ ಅವರು ಒಂದು ರಟ್ಟಿನ ಡಬ್ಬಿಯಲ್ಲಿ ಸರಾಯಿಯನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದನು. ಸದರಿ ವ್ಯಕ್ತಿಯ ಬಳಿ Original Choice Wiskyಯ 75 Pouchಗಳು ಮತ್ತು 450 ರೂಪಾಯಿ ನಗದು ಹಣ ಇತ್ತು. ಅದನ್ನು ಜಪ್ತಿಪಡಿಸಿಕೊಂಡು ಪಂಚನಾಮೆಯನ್ನು 10.30 ರಿಂದ 11.30 ರವರೆಗೆ ಜರುಗಿಸಿ ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಹಾಕಿ ಜಪ್ತಿಪಡಿಸಿಕೊಂಡಿರುತ್ತೇವೆ ಮರಳಿ 12.00 ಗಂಟೆಗೆ ಠಾಣೆಗೆ ಬಂದಿರುತ್ತೇವೆ. ಎಂದು ಸಾಕ್ಷಿ ನುಡಿದಿರುತ್ತಾರೆ, ನೀವೇನು ಹೇಳುತ್ತೀರಿ?

ಉತ್ತರಃ ಆರೋಪಿ.ಸುಳ್ಳು.

ಪ್ರಶ್ನೇ 3- **ಸಿ.ಡಬ್ಲ್ಯೂ.8. ಪಿ. ಡಬ್ಲ್ಯೂ. 4, ಶಾಂತಪ್ಪ ತಂದೆ ನಿಂಗಪ್ಪ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ದಿಃ15.08.2024 ರಿಂದ ಇಲ್ಲಿಯವರೆಗೆ ಮಾದನ ಹಿಪ್ಪರಗಾ ಠಾಣೆಯಲ್ಲಿ ಎ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ ದಿಃ 22.02.2025 ರಂದು ನಾನು ಠಾಣಾಧಿಕಾರಿಯ ಕರ್ತವ್ಯದಲ್ಲಿದ್ದಾಗ ಚಾಸ-1ರವರು ಠಾಣೆಗೆ ಹಾಜರಾಗಿ ಒಂದು ಅಸಲು ಜಪ್ತಿಪಂಚನಾಮೆ, ಮುದ್ದೆ ಮಾಲು ಮತ್ತು ಆರೋಪಿಯನ್ನು ಹಾಜರುಪಡಿಸಿ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿದ ಮೇರೆಗೆ ನಾನು ಮಾದನ ಹಿಪ್ಪರಗಾ ಠಾಣೆ ಗುನ್ನ ಸಂಖ್ಯೆ 17/2025 ಅಂತಾ ದಾಖಲಿಸಿಕೊಂಡು ತನಿಖೆ ಕೈಗೊಂಡು ಅದೇ ದಿನ 22.02.2025 ರಂದು ಮಧ್ಯಾಹ್ನ 1.00 ಗಂಟೆಗೆ ಆ ಪ್ರಕರಣದ ಪ್ರ.ವ.ವರದಿಯನ್ನು ನಮ್ಮ ಸಿಬ್ಬಂದಿಯ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿ ಅದೇ ದಿನ ಆರೋಪಿಯ ಸ್ವ ಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಅದೇ ದಿನ 22.02.2025 ರಂದು ಆರೋಪಿಗೆ ಕಲಂ 35 ಬಿ ಎನ್ ಎಸ್ ಪ್ರಕಾರ ನೋಟಿಸ್ ನೀಡಿರುತ್ತೇನೆ ಅದೇ ದಿನ ಚಾಸ-4ರವರ ದಾಳಿಗೆ ಸಂಬಂದಿಸಿದ ಹಾಗೂ 63 ಬಿ ಎಸ್ ಎ ಪ್ರಕಾರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 04.03.2025 ರಂದು ಚಾಸಾ-6ರವರ FSL ವರದಿಯನ್ನು ಪಡೆಯಲು ಮು.ಮಾಲನ್ನು ಸಲ್ಲಿಸಿದ ಬಗ್ಗೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 01.04.2025 ರಂದು ಡಿ ವೈ ಎಸ್ಪಿ ಕಚೇರಿಯಿಂದ FSL ವರದಿಯನ್ನು ತೆಗೆದುಕೊಂಡಿರುತ್ತೇನೆ ಅದೇ ದಿನ 01.04.2025 ರಂದು ಆರೋಪಿಯ ಮೇಲೆ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದ ಕಾರಣ ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ.ಸುಳ್ಳು .

ಪ್ರಶ್ನೆ 4- **ಸಿ.ಡಬ್ಲ್ಯೂ.1, ಪಿ. ಡಬ್ಲ್ಯೂ. 5 ಸವಿತಾ ತಂದೆ/ಗಂಡ ಮಲ್ಲಿಕಾರ್ಜುನ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ಅಗಸ್ಟ 2024 ರಿಂದ ಇಲ್ಲಿಯವರೆಗೆ ಮಾದನ ಹಿಪ್ಪರಗಾ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 22.02.2025 ರಂದು ನಾನು ಠಾಣೆಯಲ್ಲಿ ಇದ್ದಾಗ 08.30 ಸುಮಾರಿಗೆ ಹಿರೋಳ್ಳಿ ಗ್ರಾಮದಲ್ಲಿ ಶ್ರೇಯಸ್ ಪಾನಶಾಪ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಧ್ಯ ಮಾರಟ ಮಾಡುತ್ತಿದ್ದಾರೆ ಅಂತಾ ಖಚಿತ ಬಾತ್ಮಿ ಬಂದಿದ್ದು ಮೇಲಾಧಿಕಾರಿಗಳಿಗೆ ಮಾಹಿತಿ ತಿಳಿಸಿ ಪರವಾನಿಗೆ ಪಡೆದುಕೊಂಡು ನಮ್ಮ ಸಿಬ್ಬಂದಿಯವರಾದ ಚಾಸಾ-4 ರಿಂದ 6ರವರ ಮೂಲಕ ಪಂಚರಾದ ಚಾಸಾ-2 ಮತ್ತು 3ರವರನ್ನು ಕರೆಯಿಸಿ ಮಾಹಿತಿ ತಿಳಿಸಿ ಅವರು ಒಪ್ಪಿ ಕೊಂಡ ಮೇರೆಗೆ ಸರ್ಕಾರಿ ವಾಹನ ನಂಬರ್ ಕೆ.ಎ. 32/ಜಿ-1028 ರಲ್ಲಿ ನಮ್ಮ ಸಿಬ್ಬಂದಿ ಜೊತೆಗೆ ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ಶ್ರೇಯಸ್ ಪಾನಶಾಪ್‌ದಿಂದ ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ ಪರಿಶೀಲನೆ ಮಾಡಿ ಬಾತ್ಮಿಯನ್ನು ಖಚಿತಪಡಿಸಿಕೊಂಡು ಸುಮಾರು 10.30 ಗಂಟೆಗೆ ದಾಳಿ ಮಾಡಲಾಗಿ ಸದರಿ ವ್ಯಕ್ತಿಯ ಹೆಸರನ್ನು ವಿಚಾರಿಸಲಾಗಿ ಗುರುಬಸಪ್ಪಾ ತಂದೆ ಸೋಮನಾಥ ಉಡಗಿ ಅಂತಾ ತಿಳಿಸಿದ್ದು, ಅವರ ನ್ಯಾಯಾಲಯದಲ್ಲಿ ಇರುವ ಆರೋಪಿ ಅಂತಾ ಗುರುತಿಸುತ್ತಾರೆ. ಸದರಿ ವ್ಯಕ್ತಿಗೆ ಪರವಾನಿಗೆ ಬಗ್ಗೆ ವಿಚಾರಿಸಲಾಗಿ ನನ್ನ ಬಳಿ ಪರವಾನಿಗೆ ಇಲ್ಲ ಅಂತಾ

ತಿಳಿಸಿರುತ್ತಾರೆ ನಂತರ ಸದರಿ ವ್ಯಕ್ತಿಯ ಬಳಿ ಒಂದು ರಟ್ಟಿನ ಡಬ್ಬಿಯಲ್ಲಿ ಇದ್ದ Original Choice 90 ML ನ Delux Wiskeyಯ 75 Pouchಗಳನ್ನು ಜಪ್ತಿ ಪಡಿಸಿಕೊಂಡು ಅಂಗಶೋಧನೆ ಮಾಡಿದಾಗ ರೂ. 450/- ಹಣ ದೊರೆತಿರುತ್ತದೆ. ಸದರಿ ಮು. ಮಾಲನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡು 10.30 ಗಂಟೆಯಿಂದ 11.30 ಗಂಟೆಯವರೆಗೆ ಪಂಚರ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿರುತ್ತೇನೆ ನಂತರ ಮುಂದಿನ ಕ್ರಮಕ್ಕಾಗಿ ಆರೋಪಿ ಮು.ಮಾಲು ಜಪ್ತಿಪಂಚನಾಮೆ ಮತ್ತು ವರದಿಯೊಂದಿಗೆ ಠಾಣಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು .

ಪ್ರಶ್ನೆ 5- ನೀವು ಏನನ್ನಾದರೂ ಹೇಳ ಬಯಸುವೀರಾ ?

ಉತ್ತರಃ ಆರೋಪಿ. ಏನು ಇಲ್ಲ

ಪ್ರಶ್ನೆ 6- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ ?

ಉತ್ತರಃ ಆರೋಪಿ. ಇಲ್ಲ

(ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)

**ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ.**